

ಕಾಡ್ಗಿಚ್ಚಿಗೆ ತುತ್ತಾದ ಜಾಲಾರದ ಮರ

ಎರಡನೇ ಸಲ ನಾನು ದೇವರಾಯನ ದುರ್ಗದ ಚಾರಣದಲ್ಲಿ ಕೆಲವು ಜಾಲಾರದ ಮರಗಳನ್ನು ಗಮನಿಸಿದ್ದುಂಟು. ಆದರೆ ಜಾಲಾರದ ಕಾಡನ್ನು ನೋಡಿದ್ದು ಇದೇ ಪ್ರಥಮ. ಸೂಳೆಕಲ್ಲು ಕುರಂಕೋಟೆ ಕಾಡುಗಳಲ್ಲಿ ಜಾಲಾರ ಮರಗಳು ಜಾತ್ರೆ ಸೇರಿದ್ದವು. ಇಡೀ ಕಾಡು ಎಲೆಯುದುರಿಸಿ ಬರಲಾಗಿ ನಿಂತಿರುವಾಗ, ಅವುಗಳ ನಡುವೆ ಗಿಳಿಹಸುರಿನ ಜಾಲಾರದ ಮರಗಳು ಎದ್ದು ಕಾಣುತ್ತಿದ್ದವು. ಹೂವಿನ ರಥಗಳಂತೆ ತೋರುವ ಅವು, ಅಕ್ಕಿ ಚೆಲ್ಲಿದಂತೆ ಹೂವನ್ನು ಸುರಿಸಿ ನೆಲವನ್ನೆಲ್ಲ ಬೆಳ್ಳಗೆ ಮಾಡಿದ್ದವು. ಜಾಲಾರದ ಬಿಳುಪಿಗೆ ಸ್ಪರ್ಧೆ ಕೊಡುವಂತೆ ಮುತ್ತುಗದ ಮರಗಳು, ತಮ್ಮೆಲ್ಲ ಎಲೆಯುದುರಿಸಿ, ರಕ್ತಗೆಂಪಿನ ಹೂವುಗಳನ್ನು ಬಿಟ್ಟು ರಗರಗ ಹೊಳೆಯುತ್ತಿದ್ದವು. ಹೀಗೆ ಜಾಲಾರದ ಚಾರಣವು ಮುತ್ತುಗದ ಚಾರಣವೂ ಆಯಿತು.

ಶಿವರಾತ್ರಿಯ ದಿನಗಳಲ್ಲಿ ಜಾಲಾರ ಹೂವನ್ನು ಸ್ಥಳೀಯರು ಕಿತ್ತುತಂದು ಮಾರುವ ಪದ್ಧತಿಯಿದೆಯಂತೆ. ಸಿದ್ಧರಬೆಟ್ಟದ ಸುತ್ತಲೂ ಅನೇಕ ಅಮ್ಮಂದಿರ ಗುಡಿಗಳಿವೆ. ಅವುಗಳ ಹಬ್ಬ ಜಾತ್ರೆಗಳಲ್ಲಿ ಜಾಲಾರ ಹೂವನ್ನು ಮುಡಿಸುವರು. ಗುಪ್ಪಟ್ಟಣದ ಕಾವಲಮ್ಮನು ಜಾಲಾರ ಹೂ ಮುಡಿದು ಓಡಾಡುವಾಗ, ಅವಳ ಚೆಲುವಿಗೆ ವಜ್ರಮುತ್ತು ವ್ಯಾಪಾರ ವ್ಯಾಪಾರಿಯೊಬ್ಬ ಮೋಹಿತನಾದ ಕತೆಯನ್ನು ನಾವು ಕೇಳಿದೆವು. ಗುಪ್ಪಟ್ಟಣದ ದೊಡ್ಡಕ್ಕನವರು ನಮಗಾಗಿ ಕಾವಲದಮ್ಮನ ಹಾಡುಗಳನ್ನು ಹಾಡಿದರು. ಪುಷ್ಪಚಾರಣವು ಕಂಪಿನಿಂದ ಮಾತ್ರವಲ್ಲ, ಇಂಪಾದ ಕತೆ ಮತ್ತು ಹಾಡುಗಳಿಂದಲೂ ತುಂಬಿತು.

ಜಾಲಾರದ ಕೋಮಲ ಹೂಗಳು ಕಠಿಣವಾದ ಕಲ್ಲು ಬೆಟ್ಟಗಳಲ್ಲಿ ಅರಳುತ್ತವೆ. ಗಮನಿಸಿದೆ: ಜಾಲಾರ ಮರಗಳು ಬೆಟ್ಟಗಳ ನೆತ್ತಿಯಲ್ಲಿರಲಿಲ್ಲ. ಕಣಿವೆಯ ಸಮತಳದಲ್ಲಿಯೂ ಇರಲಿಲ್ಲ. ಅವು ಬೆಟ್ಟಗಳ ಸೊಂಟಕ್ಕೆ ಹಸಿರು ಬೆಲ್ಟುಕಟ್ಟಿದಂತೆ ನಡುಭಾಗದಲ್ಲಿ, ದೊಡ್ಡ ಬಂಡೆಗಳ ಸಂದಿಯಲ್ಲಿ, ಮಳೆನೀರು ನಿಲ್ಲದಂತೆ ಕೆಳಕ್ಕೆ ಜಾರುವ ಇಳುಕಲಿನಲ್ಲಿ ಬೆಳೆದಿದ್ದವು. ಪ್ರತಿ ಸಸ್ಯ ಪ್ರಭೇದವೂ, ಪ್ರಾಣಿಪಕ್ಷಿಗಳೂ ತಮ್ಮದೇ ಆದ ಸಹಜ ಪರಿಸರದಲ್ಲಿ ಮಾತ್ರ ಬದುಕುಳಿಯುತ್ತವೆ. ಜಾಲಾರದ ಹೂವು ಹದಿನೈದು ದಿನಗಳ ಬಳಿಕ ಉದುರಿ ಕಾಯಾಗುತ್ತವೆ. ಸಹಸ್ರಾರು ಬೀಜಗಳು, ತಮಗಂಟಿದ ಕಿರುರೆಕ್ಕೆಗಳಿಂದ ಗಾಳಿಯಲ್ಲಿ ಗರಗರ ತಿರುಗುತ್ತ ಹಾರುತ್ತ ನೆಲಕ್ಕಿಳಿಯುತ್ತವೆ. ನೆಲ ಹದವಾಗಿದ್ದರೆ ಅಂಕುರಗೊಂಡು ಗಿಡವಾಗುವುದು ಒಂದೊ ಎರಡೊ.

ಜಾಲಾರವನ್ನು ಸಮತಟ್ಟು ಪ್ರದೇಶದಲ್ಲಿ ಬೆಳೆಸುವುದಕ್ಕೆ ಮಾಡಿದ ಕೃತಕ ಯತ್ನಗಳು ಬಹುತೇಕ ವಿಫಲವಾಗಿವೆ. ಚಾಮರಾಜನಗರದ ದೀನಬಂಧು ಆಶ್ರಮದ ಜಿ.ಎಸ್. ಜಯದೇವ್ ಅವರು ಇವನ್ನು ಬೆಳೆಸುವ ಯತ್ನ ಮಾಡಿದರು. ಅವರು ಹಾಕಿದ ಸಾವಿರಾರು ಬೀಜಗಳಲ್ಲಿ ಮೊಳಕೆ ಒಡೆದವು ಕೆಲವೇ. ಬದುಕಿದ್ದು ಒಂದು ಮಾತ್ರ. ನಾವು ಆಶ್ರಮಕ್ಕೆ ಹೋದಾಗ ಹೀಗೆ ಬದುಕುಳಿದ ಒಂದು ಗಿಡ ಆಳೆತ್ತರಕ್ಕೆ ಬೆಳೆದು ನಿಂತಿತ್ತು. ಜಾಲಾರ ಉಳಿಸುವ ಒಂದೇ ಹಾದಿಯೆಂದರೆ, ಅದು ಸಹಜವಾಗಿ ಬೆಳೆಯುವ ಕಡೆ ಅವುಗಳಿಗೆ ಬೇಕಾದ ಪರಿಸರವನ್ನು ಹದಗೆಡಿಸದೆ ಇರುವುದು.

ಜಾಲಾರವು ಅಳಿವಿನಂಚಿನ ಸಸ್ಯ ಎಂದು ನಾನು ಭಾವಿಸಿದ್ದೆ. ಆದರೆ ಅವು ಗುಂಪಾಗಿ ಕುರಂಕೋಟೆಯ ದೊಡ್ಡಕಾಯಪ್ಪನ ಗುಡಿಯ ಹಿಂದಿನ ಕಾಡುಗಳಲ್ಲೂ, ಮಂಚಲದೊರೆಯ ಮದಗದ ಬೆಟ್ಟದಲ್ಲೂ ಗೋಚರಿಸಿದವು. ನಿಸರ್ಗದಲ್ಲಾಗುವ ವಿಪರೀತಗಳನ್ನು ಎದುರಿಸಿ ಬದುಕುಳಿವ ಶಕ್ತಿ ಕುರುಚಲು ಕಾಡುಗಳಿಗಿದೆ. ಆದರೆ ಮಾನವ ಹಸ್ತಕ್ಷೇಪದಿಂದ ಆಗುವ ಅನಾಹುತಗಳನ್ನು ಅವು ತಡೆದು ಬದುಕಲಾರವು. ಸೂಳೆಕಲ್ ಅರಣ್ಯದಲ್ಲಿ ನೆಟ್ಟಿರುವ ನೀಲಗಿರಿ ಮರಗಳು, ಅರಣ್ಯ ಇಲಾಖೆಯ ಅಸೂಕ್ಷ್ಮ ಆಕ್ರಮಣಕಾರಿ ಧ್ವಜದಂತೆ ಜಾಲಾರದ ನಡುವೆ ನಿಂತಿದ್ದವು. ಈ ಭಾಗದ ಕಾಡಂಚಿನಲ್ಲಿ ನಡೆಯುತ್ತಿರುವ ಕಲ್ಲು ಕ್ವಾರಿಗಳು ಜಾಲಾರಕ್ಕೆ ಒಂದು ದಿನ ಕೇಡು ತರಬಲ್ಲವು. ಮಾಗಿಗೆ ಒಣಗಿದ್ದ ಕರಡೆಹುಲ್ಲಿಗೆ ಸ್ಥಳೀಯರು ಬೆಂಕಿಯಿಟ್ಟು ಗುಡ್ಡಗಳೆಲ್ಲ ಸುಟ್ಟು ಮಸಣದ ನೆಲದಂತೆ ಕರ್ರಗಾಗಿದ್ದವು. ಕಾಲಿಟ್ಟಲ್ಲಿ ಬೂದಿ ಮೇಲಕ್ಕೆ ಹಾರುತ್ತಿತ್ತು. ಹೂಗಂಪನ್ನು ಮೀರಿಸುವಂತೆ ಸುಟ್ಟವಾಸನೆ ಮೂಗಿಗೆ ತೀಡುತ್ತಿತ್ತು. ಕಾಡ್ಗಿಚ್ಚಿಗೆ ಸಿಲುಕಿ ಜಾಲಾರದ ಸಸಿಗಳು ಬೆಂದುಹೋಗಿದ್ದವು. ಕೆಲವೆಡೆ ದೊಡ್ಡ ಮರಗಳು ಕೂಡ ಝಳಕ್ಕೆ ಕೆಂಪಾಗಿ ಸುಟ್ಟ ಬದನೆಯಾಗಿದ್ದವು. ಹೊಸಹುಲ್ಲು ಸೊಂಪಾಗಿ ಚಿಗುರುತ್ತದೆ ಎಂದು ದನಕುರಿಯವರು ಬೆಂಕಿ ಹಾಕುವ ಕೆಲಸ ಮಾಡುವುದು ಎಲ್ಲರಿಗೂ ಗೊತ್ತಿದೆ. ಆದರೆ ಬೆಂಕಿಗೆ ನಾನು ಕೇಳಿದ ಎರಡನೇ ಕಾರಣ ವಿಚಿತ್ರವಾಗಿತ್ತು. ಈ ಸೀಮೆಯಲ್ಲಿ ಬೆಂಕಿ ಹಾಕುವ ಮನೆತನಗಳೇ ಇವೆಯಂತೆ; ಹಾಕದಿದ್ದರೆ ಅವರಿಗೆ ಉಂಡಿದ್ದು ಕರಗುವುದಿಲ್ಲವಂತೆ. ನಿದ್ದೆ ಬರುವುದಿಲ್ಲವಂತೆ. ಜನರಲ್ಲಿ ತಮ್ಮ ಜಲ ಕಾಡು ನೆಲದ ಬಗ್ಗೆ ಪ್ರೀತಿ ಕಾಳಜಿ ಸೂಕ್ಷ್ಮತೆ ಇರದಿದ್ದರೆ ಏನು ತಾನೇ ಮಾಡಬಹುದು?



ಬಂಡೆಗಲ್ಲಿನ ಅಂಚಿನಲ್ಲಿ ಜಾಲಾರ

ನಾವು ಹೂವಿನಕಣಿವೆ ನೋಡಲು ಹಿಮಾಲಯಕ್ಕೆ ಹೋಗುತ್ತೇವೆ. ಕುರಿಂಜಿ ದರ್ಶನಕ್ಕೆ ಪಶ್ಚಿಮಘಟ್ಟಕ್ಕೆ ಹೋಗುತ್ತೇವೆ. ಆದರೆ ನಮ್ಮಲ್ಲಿರುವ ಈ ಅಪರೂಪದ ಹೂಮರಗಳನ್ನು ಮರೆತಿದ್ದೇವೆ. ಒಂದು ಬಗೆಯಲ್ಲಿ ಮರೆತಿರುವುದು ಒಳ್ಳೆಯದೊ ಏನೊ? ಜಾಲಾರ ನೋಡಲು ಹೋದವರು ಹೂವಿನ ಕೊಂಬೆಗಳನ್ನು ಮುರಿದು ಮರಗಳನ್ನು ಬೋಳಾಗಿಸುವ ಅಪಾಯವೂ ಇದೆ. ಆದರೂ ನಮ್ಮ ಪರಿಸರದಲ್ಲಿರುವ ವಿಶಿಷ್ಟ ಕಾಡುಗಳು ಚಿಗಿತಾಗ, ಹೂತಾಗ, ಫಲ ಬಿಟ್ಟಾಗ ನೋಡುವುದಕ್ಕೆಂದೇ ಹಸಿರುಯಾತ್ರೆಯ ಮಾಡುವ ಪದ್ಧತಿಯೊಂದು ರೂಢಿಯಾಗಬೇಕು. ಈ ಹಸಿರುಯಾತ್ರೆಯು ಆ ಪರಿಸರದ ಜನರ ಬದುಕಿನ ಸೃಜನಶೀಲತೆಯನ್ನು, ಹಬ್ಬಜಾತ್ರೆಗಳ ಸಂಭ್ರಮವನ್ನು ಹಾಗೂ ಬವಣೆಯನ್ನು ಒಳಗೊಳ್ಳುವಂತಾಗಬೇಕು. ಆಗ ಹೂವಿಗಾಗಿ ಮಾಡುವ ಚಾರಣವು, ಸಂಸ್ಕೃತಿಯ ಯಾತ್ರೆಯೂ ಆಗುತ್ತದೆ. ■